# ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಕುಮಟಾ.

## ಸಿ ಸಿ ನಂ 3/2024

ಜಯಲಕ್ಷ್ಮಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ,
ಶಾಖೆಃ ಗೋಕರ್ಣ . .... ಫಿರ್ಯಾದಿ

ವಿರುದ್ದ

ಹರಿಶ್ಚಂದ್ರ ಯಶವಂತ ನಾಯ್ಕ ...... ಆರೋಪಿ

| | |
|---|---|
| ಆರೋಪಿಯ ಹೆಸರು | – ಹರಿಶ್ಚಂದ್ರ ಯಶವಂತ ನಾಯ್ಕ |
| ವಯಸ್ಸು | – ಸುಮಾರು 46 ವರ್ಷ |
| ವಾಸ್ತವ್ಯ | – ಬಿಜ್ಜೂರ, ಗೋಕರ್ಣ, ತಾಃ ಕುಮಟಾ |

**ದಿನಾಂಕಃ** 11.09.2024

## ಆಪಾದನೆ

ಆರೋಪಿತರಾದ ನೀವು ಫಿರ್ಯಾದಿ ಸಂಸ್ಥೆಯಿಂದ ಪಡೆದ ಸಾಲದ ಹಣದ ಮರುಪಾವತಿಗಾಗಿ ಕರ್ನಾಟಕ ಬ್ಯಾಂಕ್ ಲಿ, ಗೋಕರ್ಣ ಶಾಖೆಯ ಚೆಕ್ ನಂಃ 037481 ನೇದನ್ನು ದಿನಾಂಕಃ 24.11.2023 ರಂದು ರೂ.4,16,167/- ಕ್ಕೆ ಬರೆದು ಸಹಿ ಮಾಡಿಕೊಟ್ಟಿದ್ದು, ಫಿರ್ಯಾದಿ ಸಂಸ್ಥೆಯವರು ಸದ್ರಿ ಚೆಕನ್ನು ನಗದೀಕರಣಕ್ಕಾಗಿ ತಮ್ಮ ಖಾತೆ ಇರುವ ಬ್ಯಾಂಕಗೆ ಹಾಜರುಪಡಿಸಿದಾಗ ಬ್ಯಾಂಕಿನವರು Refer to Drawer ಅಂತಾ ಮೇಮೋ ನೀಡಿ ಚೆಕ್‌ನ್ನು ವಾಪಸ್ ಮಾಡಿರುತ್ತಾರೆ. ಈ ಕುರಿತು ಫಿರ್ಯಾದಿಯು ನಿಮಗೆ ತಮ್ಮ ವಕೀಲರ ಮೂಲಕ ತಾಃ 06.12.2023 ರಂದು ರಜಿಸ್ಟರ್ಡ ನೋಟಿಸು ಕೊಟ್ಟಿದ್ದು, ಸದ್ರಿ ನೋಟಿಸನ್ನು ನೀವು ಸ್ವೀಕರಿಸಿಯು, ಚೆಕ್ಕಿನಲ್ಲಿ ನಮೂದಿಸಿದ ಹಣವನ್ನು ಕೊಡದೇ **ನೆಗೋಶಿಯಬಲ್ ಇನಸ್ಟ್ರುಮೆಂಟ್ ಕಾಯಿದೆ ಕಲಂ138**ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆಃ 1) ಈಗ ನಿಮಗೆ ಮೇಲೆ ಓದಿ ಹೇಳಿದ ಆರೋಪಣೆ ಕೇಳಿ ತಿಳಿಯಿತೇ?
ಉತ್ತರಃ

ಪ್ರಶ್ನೆಃ 2) ನೀವು ಈ ಮೇಲಿನ ಆಪಾದನೆಯನ್ನು ಒಪ್ಪಿಕೂಳ್ಳುತ್ತೀರಾ? ಅಥವಾ ನಿಮ್ಮ ಬಳಿ ಪ್ರತಿರಕ್ಷೆ ಇದೆಯೇ?
ಉತ್ತರಃ

(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಆರೋಪಿ ಉತ್ತರಿಸಿದ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬರೆದುಕೊಡಂದ್ದಾಗಿದೆಯೆಂದು ನಾನು ಈ ಮೂಲ ದೃಢಿಕರಿಸುತ್ತೇನೆ.)

sd/-

**ಹೆಚ್ಚುವರಿ ಪ್ರ.ದ.ನ್ಯಾ. ದಂಡಾಧಿಕಾರಿ,**
**ಕುಮಟಾ.**